# ಗಂಡನೇಕೆ ದೂರನಾದ?

ಆರ್. ಶ್ರೀನಾಗೇಶ್



ಈಶ್ವರ ಬಡಿಗೇರ

(ಮುಂದುವರಿದ ಭಾಗ)

ಎಂದರೆ– ಹುಡುಗನಿಗೆ ದಾಂಪತ್ಯ ಜೀವನ ನಡೆಸುವ ಸಾಮರ್ಥ್ಯವೇ ಇಲ್ಲ ಎಂಬುದು! ಈಗ ಆ ಹುಡುಗ ವಿಚ್ಛೇದನವನ್ನೂ ಕೊಡದೆ ದೀಪಾಳ ಮೇಲೆ ಬೇರೆ ಬೇರೆ ಮೊಕದ್ದಮೆಗಳನ್ನು ಹಾಕಿ ಕಾಡುತ್ತಿದ್ದಾನೆ. ಎರಡು ವರ್ಷಗಳಿಂದ ಅವಳು ಏಕಾಂಗಿಯಾಗಿ ಹೋರಾಡಿಕೊಂಡು ನರಳುತ್ತಿದ್ದಾಳೆ.

ಇಲ್ಲಿ ದೀಪಾಳ ಪೋಷಕರಿಗೆ ಮದುವೆಗೆ ಮುಂಚೆಯೇ ಸಾಕಷ್ಟು ಅಪಾಯದ ಸಂಕೇತಗಳು ಸಿಕ್ಕಿದ್ದವು. ಅವನ್ನು ಅವರು ನಿರ್ಲಕ್ಷಿಸಿದ ಪರಿಣಾಮ ದೀಪಾಳ ಇವತ್ತಿನ ಈ ನರಳಾಟ. ಮದುವೆ ಮಾಡಿಕೊಳ್ಳಲೇಬೇಕೆ.. ಎನ್ನುವ ಇವತ್ತಿನ ಕೆಲವು ಯುವಜನರ ಪ್ರಶ್ನೆಗಳಿಗೆ ಇಂತ ಘಟನೆಗಳೂ ಕಾರಣವಾಗುವುದಿದೆ.

ಮತ್ತೊಂದು ಪ್ರಸಂಗದಲ್ಲಿ ಮದುವೆ ನಿಶ್ಚಯವಾದ ನಂತರ ಹುಡುಗ ನಡೆದುಕೊಳ್ಳುತ್ತಿದ್ದ ರೀತಿಯಿಂದ ಅನುಮಾನಗೊಂಡು ಹುಡುಗಿಯೊಬ್ಬಳು ಅವನ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದಳು. ಆಗ ಅವನಿಗೆ ಬೇರೊಬ್ಬ ಹುಡುಗಿಯ ಜೊತೆ ಪ್ರೇಮಸಲ್ಲಾಪ ನಡೆಯುತ್ತಿರುವುದು ಗೊತ್ತಾಯಿತು. ಅವಳಿಗೆ ಈ ವಿಷಯ ಗೊತ್ತಾಯಿತು ಎಂದು ಹುಡುಗನಿಗೆ ತಿಳಿದು ಬಂದ ಮಾರನೆಯ ದಿನದಿಂದ ಕೆಲ ಸಮಯ ಅವನು ನಾಪತ್ತೆಯಾಗಿದ್ದ. ಹುಡುಗನ ಮನೆಯವರು ಹುಡುಗಿಯನ್ನು ನೋಡಿದ ದಿನದಿಂದಲೇ ಮದುವೆಗೆ ತುಂಬ ತರಾತುರಿ ಮಾಡುತ್ತಿದ್ದರು. ನಿಶ್ಚಿತಾರ್ಥ ಮತ್ತು ಮದುವೆ ಮಂಟಪ ನಿಗದಿ ಪಡಿಸಲು ಅವರೇ ಓಡಾಡಿದರು! ಇವೆಲ್ಲವೂ ಅನುಮಾನಕ್ಕೆ ಪುಷ್ಟಿ ನೀಡಿದ್ದವು.

ಈ ಪ್ರಸಂಗದಲ್ಲಿ ಅಪಾಯದ ಸಂಕೇತಗಳು ಸಿಕ್ಕಾಗ ಅದರ ಜಾಡು ಹಿಡಿದು ಮುಂದೆ ಹೋಗಿದ್ದುದರಿಂದ ಹುಡುಗಿ ಬಚಾವಾದಳು!

ಅಪಾಯದ ಸಂಕೇತಗಳನ್ನು ನಿರ್ಲಕ್ಷಿಸುವುದು ಅನಾಹುತಕ್ಕೆ ದಾರಿ ಇದು ಮೊದಲ ನಿಯಮ.

★ ಕೌಟುಂಬಿಕ ಮೌಲ್ಯಗಳು, ಜೀವನ ನಡೆಸುವ ರೀತಿ ಕುಟುಂಬದ ನಡವಳಿಕೆ ಕುರಿತು ಪ್ರಬಲ ಸಂದೇಶವನ್ನು ರವಾನಿಸುತ್ತವೆ.

★ ನೌಕರಿಯ ಬಗ್ಗೆ, ಓದಿನ ಬಗ್ಗೆ, ಆರೋಗ್ಯ ಸ್ಥಿತಿಯ ಬಗ್ಗೆ ನಿಜ ಮರೆಮಾಚಿದ್ದರೆ ಅದು ಬರಲಿರುವ ಅನಾಹುತಕ್ಕೆ ಮುನ್ನುಡಿ.

★ ಕೆಲವರು ಮಾತುಕತೆಯಾಡುವಾಗ ತಾವು ಏನನ್ನೂ ಅಪೇಕ್ಷಿಸುವುದಿಲ್ಲ ಎಂದು ಹೇಳುವರು. ಅದರ ಹಿಂದೆಯೇ ನಿಮ್ಮ ಮಗಳು ಸುಖವಾಗಿರಲು ಏನು ಕೊಡಬೇಕು ಎಂದು ನಿಮಗೇ ತಿಳಿದಿರುತ್ತದೆ ಎನ್ನುವರು. ಇದು ಅವರ ಮನಸ್ಸಿನಲ್ಲಿ ಆಸೆಗಳು ತುಂಬಿವೆ ಎಂಬುದರ ಸಂಕೇತವಿರಬಹುದು. ಎಚ್ಚರಿಕೆ ಅಗತ್ಯ. ಮಗಳು ಸುಖವಾಗಿರಲಿ ಎಂದು ಉತ್ತಮ ಸಂಬಂಧ ಹುಡುಕುವರೇ ಹೊರತು ಮದುವೆಯಾದ ಮೇಲೆ ಅಳಿಯನಿಗೆ ಎಲ್ಲವನ್ನೂ ಪೂರೈಸಿ ಮಗಳನ್ನು ಚೆನ್ನಾಗಿ ಇಟ್ಟುಕೊಳ್ಳಲಿ ಎಂದಲ್ಲ.

★ ನೇರವಾಗಿ ವರದಕ್ಷಿಣೆ, ಮದುವೆಯ ಶೈಲಿ ಮುಂತಾದ ವಿಷಯಗಳ ಪ್ರಸ್ತಾಪ ಬಂದರೆ, ಅದು ಲಾಭದ ಆಧಾರದ ಮೇಲೆ ಅವಲಂಬಿಯಾಗಿರುವ ಮದುವೆ ಇರಬಹುದು ಎಂಬ ಸಂಕೇತ. ಎಚ್ಚರಿಕೆ ಅತ್ಯಗತ್ಯ.

★ ವರದಕ್ಷಿಣೆ ಇಲ್ಲದೆ ಮದುವೆಯಾಗಲು ಮುಂದಾಗುವ, ಸರಳ ಮದುವೆ ಬಯಸುವ ಹುಡುಗರ ಬಗ್ಗೆ ಹುಡುಗಿಯ ಮನೆಯವರು ಅನುಮಾನ ಪಡುವರು ಎಂಬುದು ವಾಸ್ತವ! ಮಾಹಿತಿ ಸಂಗ್ರಹಣೆ ವಸ್ತು ಸ್ಥಿತಿ ಅರಿಯಲು ನೆರವಿಗೆ ಬರುವುದು.

★ ಹುಡುಗಿ ಯಾರನ್ನೋ ಪ್ರೀತಿಸುತ್ತಿದ್ದಾಳೆ ಎಂಬ ಕಾರಣಕ್ಕೆ ಅವಳ ಪೋಷಕರು ತರಾತುರಿಯಾಗಿ ಯಾರಿಗೋ ಕೊಟ್ಟು ಮದುವೆ ಮಾಡಿಬಿಡುವರು. ಕೆಲವರು ಹುಡುಗಿಗೆ ಇಷ್ಟವಿಲ್ಲದಿದ್ದರೂ ಒತ್ತಾಯವಾಗಿ ಮದುವೆ ಮಾಡುವರು. ಇದರಿಂದ ಅಮಾಯಕ ವ್ಯಕ್ತಿಗಳ ಜೀವನವೂ ನರಕವಾಗುವ ಸಂಭವ ಇರುತ್ತದೆ

ಎರಡನೆಯ ನಿಯಮ ಮದುವೆ ಎಂಬುದು ಎರಡು ಕುಟುಂಬಗಳ ನಡುವೆ ಸಂಬಂಧ ಬೆಸೆಯುವ ವ್ಯವಸ್ಥೆ.

ಆದುದರಿಂದ ಮದುವೆಯಿಂದ ಬರುವ ಲಾಭಗಳ ಜೊತೆ ಕುಟುಂಬಗಳ ಸಮಸ್ಯೆಗಳೂ, ಸಮಸ್ಯೆ ಉಂಟು ಮಾಡುವ ಬಂಧು ವರ್ಗದವರೂ, ವ್ಯಕ್ತಿಗತವಾದ ದೌರ್ಬಲ್ಯಗಳು– ಅಹಮಿಕೆ, ಕುತಂತ್ರ, ಕೆಟ್ಟ ಚಾಳಿಗಳು ಇತ್ಯಾದಿ– ಮದುವೆಯ ಅಡ್ಡಪರಿಣಾಮಗಳಾಗಿ ಬರುತ್ತವೆ. ಇವುಗಳಲ್ಲಿ ಎಷ್ಟು ಸಹನೀಯ, ಎಷ್ಟು ಅಸಹನೀಯ ಎಂಬುದನ್ನು ತೂಗಿ ನೋಡಿ ಮದುವೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು.

ಮದುವೆ ಆಗುವುದು ಬಾಳಿಗೆ ಹೊಸ ಆಯಾಮ ಕೊಡಲು. ನಲಿವು ತರಲು. ಬದುಕಿಗೆ ಮುದ ನೀಡಲು. ಕನಸುಗಳನ್ನು ಕಳೆದುಕೊಳ್ಳಲು ಅಲ್ಲ, ನರಳಲು ಅಲ್ಲ, ಬದುಕೇ ಸಾಕಾಗಿದೆ ಎಂಬ ಭಾವನೆ ಮೂಡಿಸಲು ಅಲ್ಲ.

ಪ್ರಹ್ಲಾದ ಉತ್ತಮ ನೌಕರಿ ಹೊಂದಿದ್ದ. ಮಧ್ಯಮ ವರ್ಗದ ಜೀವನ ನಡೆಸಲು ತೊಂದರೆ ಇರಲಿಲ್ಲ. ಕಲ್ಪನಾಳೂ ಅದೇ ವರ್ಗದವಳಾದುದರಿಂದ ತನಗೆ ಹೊಂದಿಕೊಂಡು ಹೋಗಬಹುದು ಎನಿಸಿತು. ಎರಡೂ ಕುಟುಂಬದವರಿಗೂ ಒಪ್ಪಿಗೆಯಾಯಿತು. ಮದುವೆಂಯೂ ಆಯಿತು. ಜೀವನದಲ್ಲಿ ಸ್ಥಿರತೆ ಬರುತ್ತಿದ್ದಂತೆ ಕಲ್ಪನಾಳ ಮುದುಡಿದ್ದ ಕನಸುಗಳು ಗರಿಗೆದರಲಾರಂಭಿಸಿದವು. ಅವಳ ಗೆಳತಿ ಸುನೀತಾಳ ವೈಭವೋಪೇತ ಜೀವನ ಶೈಲಿ ಇವಳನ್ನು ಆಕರ್ಷಿಸಿತ್ತು. ಆದರೆ ಅದು ತಮಗೆ ಎಟುಕುವುದಲ್ಲ ಎಂದು ಆಸೆಯನ್ನು ಅದುಮಿ ಇಟ್ಟುಕೊಂಡಿದ್ದಳು.

ಕಲ್ಪನಾಳ ಮದುವೆಯಾದ ಕೆಲ ತಿಂಗಳ ನಂತರ ಅವಳ ಗೆಳತಿ ಸುಧಾಳ ಮದುವೆ ಆಯಿತು. ಅವಳ ಗಂಡ ಎಂಜಿನಿಯರ್ ಆಗಿ ಕೈ ತುಂಬ ದುಡಿಯುತ್ತಿದ್ದ. ತನ್ನದೇ ವಾತಾವರಣದಲ್ಲಿ ಬೆಳೆದ ಸುಧಾಳ ಈಗಿನ ಜೀವನ ಶೈಲಿ ಕಲ್ಪನಾಳ ಮನಸ್ಸನ್ನು ಕೆಡಿಸ ತೊಡಗಿತು. ತನ್ನ ಗಂಡನೂ ಎಂಜಿನಿಯರ್ ಆಗಿದ್ದರೆ, ಕೈ ತುಂಬ ಸಂಪಾದನೆ ಇದ್ದಿದ್ದರೆ, ಎಂದು ಯೋಚಿಸಲಾರಂಭಿಸಿದಳು. ಇದನ್ನು ಮೊದಮೊದಲು ಸೌಮ್ಯವಾಗಿ ವ್ಯಕ್ತ ಪಡಿಸಲು ಪ್ರಾರಂಭಿಸಿ ಕ್ರಮೇಣ ಕುಟುಕಲಾರಂಭಿಸಿದಳು. ವೈಭವೋಪೇತದ ಜೀವನಕ್ಕಿಂತ ನೆಮ್ಮದಿಯ ಜೀವನ ಮುಖ್ಯ ಎಂದು ಅವಳಿಗೆ ಮನವರಿಕೆ ಮಾಡಲು ಪ್ರಹ್ಲಾದ ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾದವು. ಮನೆಯಲ್ಲಿ ನರಕ ಯಾತನೆ ಅನುಭವಿಸಲಾರದೆ, ಅದಕ್ಕೆ ಪರಿಹಾರ ಕಂಡು ಹಿಡಿಯಲಾಗದೆ ಅವನು ದೂರದ ಊರಿಗೆ ವರ್ಗ ಮಾಡಿಸಿಕೊಂಡು ಒಂಟಿಯಾಗಿ ಜೀವನ ನಡೆಸುತ್ತಿದ್ದಾನೆ.

ಮುಂದಿನ ವಾರಕ್ಕೆ